Mr. SPEAKER.—What is the meaning of that ? Please explain.

ಶ್ರೀ ಟಿ. ಡಿ. ದೇವೇಂದ್ರಪ್ಪ.—500 ರೂಪಾಯಿ ಸಾಲ ಮಂಜೂರಾದರೆ ರೈತನ ಕೈಗೆ ಎಷ್ಟು ಹಣ ಸೇರುತ್ತದೆ

Mr. SPEAKER.—What is it that the Hon'ble Member suggests ? I have disallowed it.

ಶ್ರೀ ಸಿ. ಆರ್. ರಂಗೇಗೌಡ – 20 ಜನರು ಹಣವನ್ನು ವಾಪಸು ಮಾಡಿದ್ದಾರೆಂದು ಹೇಳಿದ್ದೀರಿ. ಸರ್ಕಾರದವರು ಕೊಟ್ಟ ಹಣವೆಷ್ಟು, ಈಗ ವಾಪಸು ಮಾಡಿರುವ ಹಣವೆಷ್ಟು; ನಬ್ಬಿಡಿ ಎಷ್ಟು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದೂ ಕೂಡ ಉದ್ದ ಪಟ್ಟಿ. ಟೇಬಲ್ ಮೇಲೆ ಇಡುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ —ಮಂಜೂರಾದ ಸಾಲದ ಮೊತ್ತಕ್ಕಿಂತ ಕಡಮೆ ಹಣ ರೈತನಿಗೆ ಸೇರುತ್ತದೆನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

Mr. SPEAKER.—Is he aware of any single instance where the amount disbursed was less than the amount sanctioned ?

Sri G. V. GOWDA.—Is it not a fact that usually allotments made for the disbursement of these loans would be made late in the year with the result that the raiyats will not be getting the loans in time?

Sri RAMAKRISHNA HEGDE.—Sir, It is not correct.

Sri G. V. GOWDA.—May I know when the allotment for 1962-63 was communicated to the Divisional Commissioners ?

Sri RAMAKRISHNA HEGDE.—We have taken care to see that all the grants in the Budget are communicated to the Divisional Commissioner as soon as the demands are voted.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಣವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಎಷ್ಟನೆಯ ತಾರೀಖಿಗೆ ಕಳಿಸಿಕೊಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ನಮಾಚಾರ ನನ್ನಲ್ಲಿಲ್ಲ. ಬಡ್ಜೆಟ್ ಪಾಸಾದ 15 ದಿವಸ ಗಳೊಳಗಾಗಿ ಕಳಿಸಿಕೊಡುತ್ತೇವೆ.

Sri G. V. GOWDA.—Are all the allotments made in the budget communicated to the Divisional Commissioners by the end of April?

Sri RAMAKRISHNA HEGDE.—I have already said that is being done Sir.

New Roads taken up under P.W.D. in Kanakapura Taluk.

*Q.—101. Sri S. KARIAPPA (Kanakapura).—

Will the Government be pleased to state :—

(*a*) the new roads taken up under Public Works Department in Kanakapura Taluk about for the last three years (their names and distances may be mentioned);

(*b*) the nature of work that has been done in respect of each of these roads ;

(*c*) the amount so far spent in each case ?

*A.—Sri RAMAKRISHNA HEGDE (Minister for Co-operation and Development) [on behalf of SRI VEERENDRA PATIL (Minister for Public Works)].—

(*a*), (*b*) and (*c*) *Vide* statement given below.

STATEMENT.

Sl. No.	Name of road	Length of road in Kanakapura Taluk		Nature of improvements	Amount spent so far
1	2	3		4	5
		M.	Fg.		Rs.
1	Road from Bidadi to Mudavadi *via* Urgally.	3	...	Widening, metalling, construction of cross drainages, widening of existing culverts.	2,870
2	Hunasanahally - Maralawady Road.	22	2	Do	46,266
3	Aralalu - Alahally Road	9	2	Do	1,00,556
4	Road from Gadasahally in Kanakapura Taluk to join Iggalur in Channapatna Taluk *via* Venkatarayanadoddi and Singarajapura.	6	4	Nil	Nil

ಶ್ರೀ ಎಸ್. ಕರಿಯಪ್ಪ.—ಗಡನಹಳ್ಳಿ ಇಗ್ಗಲೂರು ರಸ್ತೆಯ ಉದ್ದವೆಷ್ಟು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಉತ್ತರದಲ್ಲಿ ಕೊಟ್ಟಿದೆ.

ಶ್ರೀ ಎಸ್. ಕರಿಯಪ್ಪ.—ಪೂರ್ತಿ distance ಕೊಟ್ಟಿದೆಯೇ ಅಥವಾ ಒಂದು ಭಾಗ ಮಾತ್ರ ಕೊಟ್ಟಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಒಟ್ಟು ದೂರ ಆರು ಮೈಲಿ ನಾಲ್ಕು ಫರ್ಲಾಂಗ್.

ಶ್ರೀ ಎಸ್. ಕರಿಯಪ್ಪ.—ಪೂರ್ತಿ ದೂರ 26 ಮೈಲಿ ಎಂದು ನಿಮ್ಮ ಉತ್ತರವನ್ನು ತಿದ್ದಿ ಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾನು ಹೇಗೆ ತಿದ್ದಿಕೊಳ್ಳುವುದಕ್ಕೆ ಬರುತ್ತದೆ, ತಿದ್ದಿಕೊಳ್ಳುವುದಕ್ಕೆ ಬರುವುದಿಲ್ಲ. ನನಗೆ ಬಂದಿರುವ information ಪ್ರಕಾರ ಉತ್ತರ ಕೊಟ್ಟಿದೆ.

ಶ್ರೀ ಎಸ್. ಕರಿಯಪ್ಪ.—ಯಾರು ಲೆಕ್ಕ ಕೊಟ್ಟಿದ್ದಾರೆಯೋ ಅವರಿಗೆ ಹೇಳಿ ತಿದ್ದಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ತಪ್ಪು ಇದ್ದರೆ ತಿದ್ದಿಸಬಹುದು.

ಶ್ರೀ ಎಸ್. ಕರಿಯಪ್ಪ.—ಈ ರಸ್ತೆಯನ್ನು ಸರ್ಕಾರಕ್ಕೆ ತೆಗೆದುಕೊಂಡದ್ದು ಯಾವ ವರ್ಷ ಎಂದು ತಿಳಿಸುತ್ತೀರಾ ?

Sri RAMAKRISHNA HEGDE.—It is during the last three years.

ಶ್ರೀ ಎಸ್. ಕರಿಯಪ್ಪ.—ಈ ರಸ್ತೆಯನ್ನು ಇಲಾಖೆಗೆ ವಹಿಸಿಕೊಂಡು ಮೂರು ವರ್ಷವಾದರೂ ಒಂದು ಕಾನನ್ನೂ ವೆಚ್ಚವಾಗದೆ ಇರುವುದಕ್ಕೆ ಕಾರಣವೇನು?

Sri RAMAKRISHNA HEGDE.—It is not correct Sir. I have given the figures here. With regard to the amount so far spent, we have it here. The difficulty with regard to the fourth road is the agency could not be fixed. Estimates are ready. Everything is ready. We could not spend the amount because the agency could not be fixed.

ಶ್ರೀ ಟಿ. ಮಾದಯ್ಯ ಗೌಡ.—ನಾಲ್ಕನೆಯ ರಸ್ತೆ ಎರಡು ತಾಲ್ಲೂಕುಗಳಲ್ಲಿ ಹೋಗುತ್ತದೆ. ಮಾನ್ಯ ಸದಸ್ಯರಾದ ಕರಿಯಪ್ಪನವರು ಕೇಳಿರುವುದು ಕನಕಪುರ ತಾಲ್ಲೂಕಿನಲ್ಲಿ ಎಷ್ಟು ಮೈಲಿ ಉದ್ದರಸ್ತೆ ಇದೆ ಎಂದು. ಕನಕಪುರ ತಾಲ್ಲೂಕಿನಲ್ಲಿ ಆರು ಮೈಲಿ ನಾಲ್ಕು ಫರ್ಲಾಂಗ್ ರಸ್ತೆ ಇದ್ದು ಉಳಿದದ್ದು ಚನ್ನಪಟ್ಟಣ ತಾಲ್ಲೂಕಿನಲ್ಲಿ 20 ಮೈಲಿ ಉದ್ದ ರಸ್ತೆ ಇದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಹೇಳುವಂಥಾದ್ದುನರಿ. ನನ್ನ ಹತ್ತಿರ ನಕಾಸೆ ಇದೆ. ಅದನ್ನು ತೋರಿಸಿ ಸ್ಪಷ್ಟಪಡಿಸುತ್ತೇನೆ.

Ayankere tank in Sakrepatna Hobli, Kadur Taluk.

*Q.—121. Smt. B. L. SUBBAMMA (Chickmagalur).—

Will the Government be pleased to state :—

(*a*) whether they are aware that the Ayankere tank in Sakrepatna Hobli, Kadur Taluk is being silted up ;

(*b*) whether any report has been received from the Secretary, Tank Development Committee and the Deputy Commissioner of concerned district, in this behalf ;

(*c*) the extent of land under the atchkat of this tank ;

(*d*) the steps they have taken in this behalf ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) No.

(*c*) 3,424 Acres.

(*d*) Steps are being taken to stop cultivation of foreshore lands.

ಶ್ರೀಮತಿ ಬಿ ಎಲ್. ಸುಬ್ಬಮ್ಮ. ಕೆರೆ ಅಭಿವೃದ್ಧಿ ಸಮಿತಿಯವರಿಂದ ಯಾವುದಾದರೂ ವರದಿ ಬಂದಿದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದೀರಿ. 3,424 ಎಕರೆ ಸಾಗುವಳಿ ಭರತಕ್ಕೆ ಈ ದೇಶದಲ್ಲಿ ದೊಡ್ಡದಾದ ಕೆರೆಗೆ ಅಡಳಿತ ಸಮಿತಿಯವರು ರಿಪೋರ್ಟ್ ಕಳಿಸಲಿಲ್ಲವೆಂದರೆ ಚಿಕ್ಕಮಗಳೂರಿನಲ್ಲಿರುವ ಅಧಿಕಾರಿಗಳು ಏನೂ ಕೆಲಸ ಮಾಡುತ್ತಿಲ್ಲವೇ ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಕೆಲಸ ಮಾಡುತ್ತಿದ್ದಾರೆ. ಸಂಬಂಧಪಟ್ಟ ಡೆಪ್ಯುಟಿ ಕಮಿಷನರಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ವ್ಯವಹಾರ ನಡೆಸಿ ದರಖಾಸ್ತಿನಲ್ಲಿ tank bed ಕೊಡಬೇಡಿ, ಕೆರೆ ಮುಚ್ಚಿಹೋಗುತ್ತದೆ, ಎಂದು ತಿಳಿಸಿದ್ದಾರೆ. ಅದರಂತೆ ಡೆಪ್ಯುಟಿ ಕಮಿಷನರು ಈಗಾಗಲೇ ಕ್ರಮ ತೆಗೆದುಕೊಂಡು ಅಸಿಸ್ಟೆಂಟ್ ಕಮಿಷನರು, ತಹಸೀಲ್ದಾರರು, ಸ್ಪೆಷಲ್ ಲ್ಯಾಂಡ್ ಅಕ್ವಿಜಿಷನ್ ಆಫೀಸರುಗಳಿಗೆ ಬರೆದು ಆ ಪ್ರದೇಶದಲ್ಲಿ ಸಾಗುವಳಿಗೆ ಜಮೀನನ್ನು ಕೊಡಬಾರದೆಂದು ತಿಳಿಸಿದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈಗಾಗಲೇ ಇಲ್ಲಿ ಸುಮಾರು ನೂರು ಎಕರೆಯಷ್ಟು ಕೊಟ್ಟಿದ್ದಾರೆಂದು ಸರಕಾರಕ್ಕೇನಾದರೂ ರಿಪೋರ್ಟ್ ಬಂದು ಅದನ್ನು ಎನ್‌ಕ್ವೈರಿ ಮಾಡಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—70 ಎಕರೆಗಳಷ್ಟು ಜಮೀನಿದ್ದುದರಲ್ಲಿ ಈಗಾಗಲೇ 35 ಎಕರೆಗಳಷ್ಟು ಕೊಟ್ಟಿದೆ. 35 ಎಕರೆಗಳಷ್ಟನ್ನು ಕೊಟ್ಟಿತ್ತು ಆದರೆ ಅದನ್ನೀಚೆಗೆ ಕ್ಯಾನ್ಸಲ್ ಮಾಡಿದ್ದೇವೆ. ಇದರ ಬಗ್ಗೆ ತಕ್ಷಣ ರಿಪೋರ್ಟು ತರಿಸಿಕೊಳ್ಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಈ ಕೆರೆಯನ್ನು ಉಠಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಮಾಡಿಸಿದರೂ ಮಾಡಿಸಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆರೆಯ ಹೂಳನ್ನು ತಪ್ಪಿಸುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಾ ?